ಅವರ ಜೊತೆಗೆ ಆಟ ಕಟ್ತಾ ಇಲ್ಲ. ನನ್ನ ಪಾಡಿಗೆ ನಾನಿದ್ದೇನೆ. ಅವರಿಗೆ ಬೇಕಾಗಿರೋ ಸಾಕ್ಷ್ಯವನ್ನು ಅವರಿಗೆ ಹೇಗೆ ತಂದುಕೊಡಲಿ? ಅದಕ್ಕೆ ಸುಳ್ಳು ಸಾಕ್ಷ್ಯ ಸೃಷ್ಟಿಸೋದಿಕ್ಕೆ ಆಗುತ್ತಾ ಅಂತ ಮುತ್ತುಚಾಂಡಿನ ಕೇಳ್ದೆ. ಯಾವತ್ತೂ ನನ್ನ ಮಾತು ಮೀರೋನಲ್ಲ ಅವ್ನು. ಆದ್ರೆ ಇವತ್ತು ಅದನ್ನು ನಿರಾಕರಿಸಿ ಬಿಟ್ಟ'

'ನೀನು ಸುಳ್ಳು ಸಾಕ್ಷ್ಯ ಹುಟ್ಟಿಸೋದು ಅಪರಾಧವಲ್ಲವೆ? ಅದಕ್ಕೆ ಮುತ್ತುಚಾಂಡಿ ನಿನ್ನ ಎಚ್ಚರಿಸಿರೋದು. ಪೊಲೀಸ್ನೋರ ಜೊತೆಗೆ ಆಟ ಕಟ್ಬೇಡ ಅಂತ ಎಚ್ಚರಿಸಿರೋದು. ಇದರಲ್ಲಿ ತಪ್ಪೇನಿದೆ? ನೀನ್ಯಾಕೆ ಅಂತಹ ಹಲ್ಕಟ್ ಕೆಲ್ಸಕ್ಕೆ ಕೈ ಹಾಕ್ದೆ?'

ಮಾಮೂನ ಮಾತು ಪಾಂಬುವಿಗೆ ಹಿಡಿಸಲಿಲ್ಲ. ಅವನ ಮುಖದಲ್ಲಿ ಕೋಪ ನುಸುಳಿತು.

'ಮಾಮೂ, ನಾನು ಪಕ್ಕಾ ವ್ಯವಹಾರಸ್ಥ. ಅತ್ತ ಕೋಲು ಮುರಿಯಬಾರದು; ಇತ್ತ ಹಾವೂ ಸಾಯಬಾರದು. ಅದು ನನ್ನ ಪಾಲಿಸಿ. ಅದನ್ನು ಪಾಲಿಸಿಕೊಂಡು ಬರ್ತಿದ್ದೀನಿ'

'ಅದಕ್ಕೆ ತಲೆ ಗಟ್ಟಿಯಾಗಿದೇಂತ ಬಂಡೆಕಲ್ಲಿಗೆ ಬಡ್ಕೊಳ್ಳೋಕಾಗುತ್ತಾ?'

'ಅಯ್ಯಾ! ಹೋಗಯ್ಯಾ! ನಿನ್ನತ್ರ ಎಂತ ಮಾತು' ಮಾಮುವಿನ ಮಾತು ಒಪ್ಪಿಕೊಳ್ಳದೆ ರಸ್ತೆಗಿಳಿದು ಕಾರಿನತ್ತ ಹೆಜ್ಜೆ ಹಾಕಲಿದ್ದ ಪಾಂಬುವಿನ ಹತ್ತಿರದಲ್ಲಿ ನಿಂತು ಇನ್ಸ್‌ಪೆಕ್ಟರ್ ಒಣ ಕೆಮ್ಮು ಹಾಕಿದ. ಇನ್ಸ್‌ಪೆಕ್ಟರ್‌ನ್ನು ಕಂಡ ಪಾಂಬು ಮುಖಕ್ಕೆ ರಕ್ತ ನುಗ್ಗಿದಂತೆ ಕೆಂಪು ಕೆಂಪಾದ!

6.

ಪಾಂಬು ತನ್ನ ಮುಖದಲ್ಲಿ ಮೂಡಿದ್ದ ಗೊಂದಲವನ್ನು ತೋರ್ಪಡಿಸಿಕೊಳ್ಳದೆ ಇನ್ಸ್‌ಪೆಕ್ಟರ್‌ನ ಎದುರಿಗೆ ನಿಂತು ಒಣ ನಗೆ ಬೀರಿದ. ಇನ್ಸ್‌ಪೆಕ್ಟರ್ ರಾಜಧಾನಿ ಮುಗುಳ್ನಕ್ಕು ಪಾಂಬುವನ್ನು ದಿಟ್ಟಿಸಿದ. ಅವನ ಮುಖದಲ್ಲಿ ಅತೀಯಾದ ನಿರಾಶೆಯ ಜೊತೆಗೆ ಭಯದ ಸಮ್ಮಿಳಿತವಿತ್ತು. ಅದನ್ನು ಗಮನಿಸಿದ ಇನ್ಸ್‌ಪೆಕ್ಟರ್ ಅವನಿಗೆ ತೋರಿಸಿಕೊಳ್ಳದಂತೆ ಪೆಟ್ಟಿಗೆ ಅಂಗಡಿಯಾತನನ್ನು ಕರೆದು ತಂಪು ಪಾನೀಯ ಕೊಡುವಂತೆ ಹೇಳಿದ. ಅಂಗಡಿಯಾತ ತಂಪು ಪಾನೀಯವನ್ನು ತಂದು ಅತೀ ವಿನಯದೊಂದಿಗೆ ಅಧಿಕಾರಿಯ ಮುಂದೆ ಚಾಚಿದ. ಅಧಿಕಾರಿ ಅದನ್ನು ಪಡೆದುಕೊಂಡು ನಿಧಾನಕ್ಕೆ ಹೀರಿದ. ಅಲ್ಲಿಯವರೆಗೂ ಪಾಂಬುವಿನ ತುಟಿಗಳು ಬೇರೆಯಾಗಲಿಲ್ಲ. ಅಧಿಕಾರಿಯೇ ತನ್ನನ್ನು ಪ್ರಶ್ನಿಸಬಹುದೆನ್ನುವ ಬಹು ನಿರೀಕ್ಷೆಯಲ್ಲಿರುವಂತೆ ಬಾಲ ಮುದುರಿ ಕುಳಿತ ಬೆಕ್ಕಿನಂತೆ ಸ್ವಲ್ಪ ದೂರದಲ್ಲಿಯೇ ನಿಂತಿದ್ದ.

ಅಧಿಕಾರಿ ಎರಡು ಸಿಪ್ ಹೀರಿ ಪಾಂಬುವನ್ನು ನೋಡಿದ. ಪಾಂಬುವಿನ ಮುಖದಲ್ಲಿ ಯಾವುದೇ ಬದಲಾವಣೆಗಳು ಕಾಣಿಸಲಿಲ್ಲ. ಅದೇ ಗಂಭೀರ ಭಯ ಮಿಶ್ರಿತವಾದ ನಿರಾಶೆಯ ಛಾಯೆ ದಟ್ಟವಾಗಿತ್ತು.

'ಪಾಂಬು, ಕುಡಿಯೋದಿಕ್ಕೆ ಏನಾದರೂ ಬೇಕೇನು?' ಆತ್ಮೀಯತೆಯಿಂದ ಕೇಳಿದ ಇನ್ಸ್‌ಪೆಕ್ಟರ್.

ಪಾಂಬುವಿನ ಮುಖ ಬೆವರಿತು. ಅಧಿಕಾರಿ ಬೇರೇನನ್ನೋ ಕೇಳುತಿರುವನೆಂಬ ಭಯ ಅವನನ್ನು ಅಪ್ಪಿಕೊಂಡಿತ್ತು. ತಡವರಿಸುತ್ತಲೇ ಉತ್ತರಿಸಿದ.

'ಇಲ್ಲ, ಇಲ್ಲ ಬೇಡ'

ಅಧಿಕಾರಿಗೆ ಅವನ ಅವಸ್ಥೆ ಕಂಡು ನಗು ಬಂತಾದರೂ ಅದನ್ನು ತೋರಿಸಿಕೊಳ್ಳದೆ ಮಾಮೂನತ್ತ ತಿರುಗಿದ.

'ಎಷ್ಟಾಯಿತು?'

'ಸಾರ್, ಬೇಡ ಸಾರ್. ನಿಮ್ಮಂತವರಿಂದ ಹಣ ಪಡ್ಕೊಳ್ಳೋದು ತಪ್ಪು ಸಾರ್' ಮತ್ತಷ್ಟು ನಡು ಬಗ್ಗಿಸಿ ಹೇಳಿದ ಮಾಮೂ.

'ಏ! ಅದೆಲ್ಲಾ ಏನೂ ಬೇಡ. ನಿನ್ನ ವ್ಯಾಪಾರ ಅದು' ರಾಜಧಾನಿ ಹಾಗೆಲ್ಲಾ ಸತಾ ಸುಮ್ಮನೆ ಇನ್ನೊಬ್ಬರ ವಸ್ತುವಿಗಾಗಿ ಎದುರು ನೋಡುವವನಲ್ಲ. ಅಥವಾ ಯಾರಾದರೂ ಹಾಗೆಲ್ಲ ಸೇವೆಯ ರೂಪದಲ್ಲಿ ಕೊಟ್ಟರೆ ತೆಗೆದುಕೊಳ್ಳಲಾರದ ನಿಯತ್ತಿನ ವ್ಯಕ್ತಿ.

ಇಪ್ಪತ್ತರ ಒಂದು ನೋಟನ್ನು ಅವನ ಮುಂದಿಟ್ಟು ತೆಗೆದುಕೊಳ್ಳುವಂತೆ ಸೂಚಿಸಿದ.

ಮಾಮೂ ಅದನ್ನು ಒಂದು ಪವಿತ್ರ ವಸ್ತುವೆನ್ನುವಂತೆ ಹಗೂರವಾಗಿ ತೆಗೆದುಕೊಂಡು ಡಬ್ಬಿಯೊಳಗೆ ಸೇರಿಸಿ ಚಿಲ್ಲರೆಯನ್ನು ತೆಗೆದು ಅಧಿಕಾರಿಯ ಕೈಗಿತ್ತ.



## ಇಲ್ಲಿಯವರೆಗೆ

ಫಾರ್ಮ್ ಹೌಸ್‌ನಲ್ಲಿ ಕಾಶಮ್ಮನನ್ನು ಮಹಡಿಯಿಂದ ಕೆಳಗಿಳಿಯದಂತೆ ನಿರ್ಬಂಧ ಹಾಕುವ ಮೇನಕಾ ಮೇಲೆ ಇನ್ಸ್‌ಪೆಕ್ಟರ್ ರಾಜಧಾನಿಗೆ ಅನುಮಾನ ಮೂಡುತ್ತದೆ. ಜತೆಗೆ ಲಹರಿ ಮಾತೆತ್ತಿದರೆ ಮೇನಕಾ ಉರಿದು ಬೀಳುವ ಬಗ್ಗೆಯೂ ಇನ್ಸ್‌ಪೆಕ್ಟರ್‌ಗೆ ಕಾರಣ ತಿಳಿಯುತ್ತಿಲ್ಲ. ಈ ಮನೆಯ ಯಜಮಾನಿಯಾಗಿಯೂ ನಿಮಗೆ ಏಕೆ ಬಂಧನ ಎಂದು ಕಾಶಮ್ಮನನ್ನು ಕೇಳಿಯೇ ಬಿಡುತ್ತಾನೆ. ಲಹರಿ ಕಣ್ಮರೆಗೂ ಈ ವಿದ್ಯಮಾನಗಳಿಗೂ ಸಂಬಂಧ ಇದೆಯೇ ಎಂಬುದನ್ನು ತಾಳೆ ಹಾಕುತ್ತಾನೆ ರಾಜಧಾನಿ. ಇನ್ಸ್‌ಪೆಕ್ಟರ್ ಕೇಳುವ ಪ್ರಶ್ನೆಗಳಿಗೆ ಕೋಪಗೊಂಡು ಸೆಟೆದು ನಿಲ್ಲುತ್ತಾಳೆ ಮೇನಕಾ. ಡ್ಯಾಡಿ ಇಲ್ಲದ ವೇಳೆ ಮನೆಗೆ ಬಂದು ತೊಂದರೆ ಕೊಡುವ ಇನ್ಸ್‌ಪೆಕ್ಟರ್ ಮೇಲೆ ಹರಿಹಾಯುತ್ತಾಳೆ ಜತೆಗೆ ಕಾಶಮ್ಮನ ಮೇಲೆ ಮೇನಕಾ ತೋರುವ ಅನುಕಂಪ ಕಂಡು ಇನ್ಸ್‌ಪೆಕ್ಟರ್‌ಗೆ ಅಚ್ಚರಿಯಾಗುತ್ತದೆ. ಕಾಶಮ್ಮನ ಮುಖದಲ್ಲಿನ ಆತಂಕ ಕಂಡು ಇನ್ಸ್‌ಪೆಕ್ಟರ್ 'ಏನಾದರೂ ತೊಂದರೆಯಾದರೆ ಕಂಪ್ಲೇಂಟ್ ಕೊಡಿ' ಎಂದಾಗ ಮೇನಕಾಳಿಗೆ ಮುಳ್ಳು ಚುಚ್ಚಿದಂತಾಗುತ್ತದೆ.

'ಪಾಂಬು, ನಿನ್ನ ಇಲ್ಲಿ ನೋಡ್ಬಿಟ್ಟು ನನಗೆ ಆಶ್ಚರ್ಯವಾಯಿತು. ಇಲ್ಲೇನು...?' ಸ್ವಲ್ಪ ಆಶ್ಚರ್ಯವನ್ನು ನಟಿಸಿದಂತೆ ಪ್ರಶ್ನಿಸಿದಾಗ ಪಾಂಬು ಹೇಳಲೋ ಬೇಡವೋ ಅನ್ನುವಂತೆ ಅವನನ್ನು ನೋಡಿದ.

'ಸಾರ್...' ರಾಗವೆಳೆದ ಅವನನ್ನು ಸಂಕೋಚ ಎಳೆದು ಹಿಡಿಯಿತು.

'ಏನಾಯ್ತು, ವಿಪರೀತ ಗಾಬರಿಯಲ್ಲಿರುವಂತಿದೆ?'

ಅಧಿಕಾರಿ ಅವನನ್ನು ಗಮನಿಸಿಯೇ ಇಲ್ಲದಂತೆ ನಟಿಸಿದ. ಪಾಂಬು ಹಚ್ಚಿಕೊಂಡಿದ್ದ ಸಿಗರೇಟನ್ನು ಅದಾಗಲೇ ಬಿಸುಟ್ಟು ಅದರತ್ತಲೇ ನೋಡುತ್ತಾ ನಿಂತಿದ್ದ.

'ಏನಿಲ್ಲ, ಸಾರ್. ನಾನು ಇಲ್ಲಿಗೆ ಬರೋ ಅನಿವಾರ್ಯತೆ ನಿಮ್ಮಿಂದಲೇ ಆದದ್ದು' ಮೈ ಚಳಿ ಬಿಟ್ಟವರಂತೆ ನುಡಿದ. ಅಧಿಕಾರಿಗೆ ಅವನ ಮಾತು ಒಂದು ಒಗಟಿನಂತೆ ಅನಿಸಿತು.

'ಏನು ಹಾಗಂದ್ರೆ? ನೀನು ನನ್ನ ಪರವಾಗಿ ಇಲ್ಲಿಗೆ ಬಂದಿರುವುದೆ?' ಅಧಿಕಾರಿಯ ಹುಬ್ಬುಗಳು ಮೇಲ್ಮುಖವಾಗಿ ನಿಂತವು.

'ಸಾರ್, ಹೌದು. ತಮಗಾಗಿ ನಾನು ಇಲ್ಲಿಯವರೆಗೂ ಬಂದಿರೋದು' ಮತ್ತಷ್ಟು ಆಶ್ಚರ್ಯ ಹುಟ್ಟಿಸುವಂತೆ ನುಡಿದ. ಇನ್ಸ್‌ಪೆಕ್ಟರ್‌ನ ಮುಖದಲ್ಲಿ ನಗು ಸುಳಿಯಿತು.

'ತಮಾಷೆಯ ಮಾತು ಆಡುತ್ತಿರುವೆ ಪಾಂಬು ನೀನು. ನನಗೋಸ್ಕರ ನೀನು ಇಲ್ಲಿಯವರೆಗೆ ಬಂದಿರುವ ಉದ್ದೇಶವೇನು?'

'ಸಾರ್...' ದನಿ ತಗ್ಗಿತು, 'ಅದೇ ಸಾರ್, ನಿಮಗೆ ಬೇಕಾಗಿರೋ ಸಾಕ್ಷ್ಯವನ್ನು ಹುಡುಕಿಕೊಂಡು ಬಂದಿರುವೆ' ಮಾತು ಮುಗಿಸಿದ ಪಾಂಬುವಿನ ಕಣ್ಣುಗಳು